ಇಂದಿನ ಈ ತಂತ್ರಜ್ಞಾನದ ಯುಗದಲ್ಲಿ ಪ್ರತಿಯೊಂದೂ ಸುಲಭದಲ್ಲಿ ಆಗುವುದರಿಂದ ಮನುಷ್ಯನಲ್ಲಿ ಕಷ್ಟಸಹಿಷ್ಣುತೆ ಕಡಮೆಯಾಗುತ್ತಿದೆ. ಈ ಮನೋಭಾವವು ಬಾಲ್ಯದಿಂದಲೇ ಬೆಳೆಯುವುದನ್ನು ನಾವು ನೋಡುತ್ತೇವೆ. ಈ ಕಾರಣದಿಂದಾಗಿ ವ್ಯಕ್ತಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಬಲಹೀನನಾಗುತ್ತಿದ್ದಾನೆ. ಇದಲ್ಲದೆ ಸಣ್ಣ ಸಣ್ಣ ವಿಷಯಗಳಿಗೆ ಕೂಡಾ ಪೈಪೋಟಿ ನಡೆಸುವ ಯುಗದಲ್ಲಿ ನಾವಿದ್ದೇವೆ. ಪ್ರಪಂಚವನ್ನು ಅರಿತುಕೊಳ್ಳುವ ಮೊದಲೇ, ಆಡುತ್ತ ಆನಂದದಿಂದ ಕಲಿಯುವ ವಯಸ್ಸಿನಲ್ಲಿಯೇ, ಮಗುವಿನಲ್ಲಿ ಸ್ಪರ್ಧಾಮನೋಭಾವವನ್ನು ಬೆಳೆಸಲಾಗುತ್ತಿದೆ. ಈ ಸ್ಪರ್ಧೆ ಅಳಿವು–ಉಳಿವಿನ ಪ್ರಶ್ನೆಯಾಗಿ ಅವನನ್ನು ಬೆಂಬತ್ತುತ್ತದೆ; ಆತನ ಆತ್ಮವಿಶ್ವಾಸವನ್ನೇ ನಾಶಮಾಡಿಬಿಡುತ್ತಿದೆ. ಚಿಕ್ಕ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯೂ ಆತನಲ್ಲಿ ಬೆಳೆಯುವುದಿಲ್ಲ. ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವ ಮನೋಭಾವ ಹೆಚ್ಚಾಗುತ್ತದೆ. ಈ ಮನೋದೌರ್ಬಲ್ಯವು ಸಮಾಜದಲ್ಲಿ ಅನೇಕ ರೀತಿಯ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ. ಈ ಸಮಸ್ಯೆಗೆ ಪರಿಹಾರವಾಗಿ ಕುಡಿತ, ಮಾದಕದ್ರವ್ಯಗಳ ಸೇವನೆ ಮುಂತಾದವುಗಳಿಗೆ ಯುವಕರು ಶರಣಾಗುತ್ತಿದ್ದಾರೆ. ಇಷ್ಟೇ ಅಲ್ಲ, ಸಣ್ಣ ಪುಟ್ಟ ಸಮಸ್ಯೆಗಳಿಗೆ ಕೂಡ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಮನೋದೌರ್ಬಲ್ಯಕ್ಕೆ ಉಪಾಯವೇನು? ಅಡ್ಡಿಆತಂಕಗಳನ್ನು ಲೆಕ್ಕಿಸದೆ ಮುನ್ನಡೆಯಬೇಕು. ಅಡ್ಡಿಆತಂಕಗಳನ್ನು ಎದುರಿಸಿದಾಗಲೇ ನಾವು ಬಲಶಾಲಿಗಳಾಗುತ್ತೇವೆ. ಅವುಗಳ ಮೂಲಕವೇ ಮಾನವ ಶಕ್ತಿವಂತನಾಗುತ್ತಾನೆ. ತನ್ನ ಶಕ್ತಿಯಲ್ಲಿ ವಿಶ್ವಾಸವನ್ನು ಹೊಂದಿ ಪುನಃಪುನಃ ಪ್ರಯತ್ನವನ್ನು ಮಾಡಬೇಕು. ದುರ್ಬಲತೆಗೆ ಅದೊಂದೇ ಪರಿಹಾರ. ಪ್ರತಿಯೊಂದು ವೈಫಲ್ಯವೂ ವ್ಯಕ್ತಿಯನ್ನು ಬಲಗೊಳಿಸುವತ್ತ ಒಂದೊಂದು ಹೆಜ್ಜೆ. ಇದನ್ನು ಪ್ರತಿಯೊಬ್ಬ ವ್ಯಕ್ತಿಯೂ ಅರಿತಿರಬೇಕು.

ವ್ಯಕ್ತಿಗೆ ನಿಜವಾದ ನೆಮ್ಮದಿ ಸಿಗುವುದು ಇತರರಿಗೆ ಆನಂದ ನೀಡುವುದರಿಂದ ಮಾತ್ರ. **'ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್'** – ಇತರರಿಗೆ ಒಳ್ಳೆಯದನ್ನು ಮಾಡುವುದು ಧರ್ಮ, ಅವರನ್ನು ಹಿಂಸಿಸುವುದು ಅಧರ್ಮ ಎನ್ನುವುದು ಸನಾತನ ಧರ್ಮದ ವಾಣಿ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ನೀತಿಯ ವಿಷಯವಾಗಿ ನಿರೂಪಿಸಲಾಗುವ ಏಕಮಾತ್ರ ವ್ಯಾಖ್ಯೆಯೆಂದರೆ 'ಯಾವುದು ಸ್ವಾರ್ಥದಿಂದ ಕೂಡಿರುವುದೋ ಅದು ಅನೈತಿಕ, ಯಾವುದು ಸ್ವಾರ್ಥಶೂನ್ಯವೋ ಅದು ನೈತಿಕ.. ಎಲ್ಲ ಹಿತಚಿಂತನೆಯ ಮತ್ತು ಧಾರ್ಮಿಕ ಭಾವನೆಯ ಸಂಕೇತ ಪದವೇ "ನಾನಲ್ಲ", "ನೀನು" ಎಂಬುದು. ಸ್ವರ್ಗವಿದೆಯೋ ನರಕವಿದೆಯೋ ಯಾರಿಗೆ ಬೇಕು? ಆತ್ಮನಿರುವನೋ ಇಲ್ಲವೋ ಅದರಿಂದ ಏನು? ಶಾಶ್ವತವಾದುದೊಂದು ವಸ್ತುವಿದೆಯೋ ಇಲ್ಲವೋ ಯಾರಿಗೆ ಬೇಕು? ನಮ್ಮ ಕಣ್ಣೆದುರಿಗೆ ಪ್ರಪಂಚವಿದೆ. ಅದು ದುಃಖದಿಂದ ತುಂಬಿ ತುಳುಕಾಡುತ್ತಿದೆ. ಬುದ್ಧನಂತೆ ಅದರಲ್ಲಿ ಪ್ರವೇಶಿಸಿ ದುಃಖವನ್ನು ಕಡಮೆ ಮಾಡಲು ಹೋರಾಡಿ. ಅಥವಾ ಆ ಮಹಾಪ್ರಯತ್ನದಲ್ಲಿ ನಿಮ್ಮ ಪ್ರಾಣವನ್ನು ಸಮರ್ಪಿಸಿ."

ಮತ್ತೂ ಮುಂದುವರಿದು ಸ್ವಾಮೀಜಿ, "ನಾವು ಏತಕ್ಕೆ ಒಳ್ಳೆಯವರಾಗಬೇಕು? ಏಕೆಂದರೆ ನಮ್ಮ ಒಳಿತಿಗಾಗಿ. ನಾವು ನಮ್ಮ ಆಲೋಚನೆಯಂತೆ ಇರುವೆವು. ಆದಕಾರಣ ನೀವು ಏನನ್ನು ಕುರಿತು ಯೋಚಿಸುವಿರೋ ಅದರ ವಿಷಯದಲ್ಲಿ ಎಚ್ಚರದಿಂದಿರಿ. ಸಚ್ಚಿಂತನೆ ಮಾಡಿದರೆ ಉತ್ತಮರಾಗುತ್ತೇವೆ. ಎಲ್ಲ ರೀತಿಯ ಋಣಾತ್ಮಕ ಭಾವನೆಗಳು ನಮ್ಮ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತವೆ. ನೀವು ಯಾರನ್ನೂ ದ್ವೇಷಿಸಬೇಡಿ. ಏಕೆಂದರೆ ಯಾವ ದ್ವೇಷ ನಿಮ್ಮಿಂದ ಬರುತ್ತದೆಯೋ ಅದು ಕೊನೆಗೆ ನಿಮ್ಮನ್ನೇ ಸೇರಬೇಕು. ನೀವು ಪ್ರೀತಿಸಿದರೆ, ಅದು ತನ್ನ ಸಂಚಾರವನ್ನು ಪೂರೈಸಿ ಕೊನೆಗೆ ನಿಮ್ಮಲ್ಲಿಗೇ ಬರುವುದು. ಅದು ಸತ್ಯದಷ್ಟೇ ಪ್ರಮಾಣವಾದುದು. ಮನುಷ್ಯನಿಂದ ಹೊರಗೆ ಹೋಗುವ ಪ್ರತಿಯೊಂದು ದ್ವೇಷದ ಅಲೆ ಕೂಡ ಅಷ್ಟೇ ವೇಗವಾಗಿ ಪುನಃ ಅವನಲ್ಲಿಗೆ ಬರುವುದು. ಇದನ್ನು ಯಾವುದೂ ತಡೆಯಲಾರದು. ಅದರಂತೆ ಪ್ರತಿಯೊಂದು ಪ್ರೀತಿಯ ಭಾವನೆ ಕೂಡ ಅವನಲ್ಲಿಗೆ ಹಿಂದಿರುಗುವುದು." ಎನ್ನುತ್ತಾರೆ. ಆದುದರಿಂದ ನಾವು ಉತ್ತಮ ಸಂಸ್ಕಾರವಂತರಾದರೆ ಅದರ ಸತ್ಪರಿಣಾಮ ನಮ್ಮ ಮೇಲೆ ಆಗುವುದು. ಅಂತೆಯೇ ನಾವು ದುಷ್ಟರಾದರೆ ಅದರ ದುಷ್ಪರಿಣಾಮ ನಮ್ಮ ಮೇಲೆಯೇ ಆಗುತ್ತದೆ. ಈ ಕಾರಣಕ್ಕಾಗಿಯಾದರೂ ನಾವು ನೀತಿವಂತರಾಗಲು ಪ್ರಯತ್ನಿಸಬೇಕು.


ಸ್ವಾಮಿ ವಿವೇಕಾನಂದರ ಚಿಂತನೆಗಳು ಮಾನವಕೇಂದ್ರಿತ ವಾದುವು. ಒಳ್ಳೆಯದೆಲ್ಲವೂ ಮನುಷ್ಯನಲ್ಲಿಯೇ ಇದೆ ಎನ್ನುವುದು ಅವರ ಪ್ರಬಲವಾದ ನಂಬಿಕೆ. ಅದನ್ನು ಸ್ವಾಮೀಜಿ **ದಿವ್ಯತೆ** ಎಂದು ಕರೆಯುತ್ತಾರೆ. ಇದನ್ನು ಅಭಿವ್ಯಕ್ತಗೊಳಿಸಬೇಕು. ಸ್ವಾರ್ಥತ್ಯಾಗದ ಮೂಲಕ ಅದನ್ನು ಅಭಿವ್ಯಕ್ತಗೊಳಿಸಬಹುದು. ಈ ಸ್ವಾರ್ಥತ್ಯಾಗವೇ ಎಲ್ಲ ನೈತಿಕತೆಯ ತಳಹದಿ ಎನ್ನುತ್ತಾರೆ ಅವರು. ಎಂದರೆ ವ್ಯಕ್ತಿ ತನ್ನ ಒಳಿತನ್ನು, ಇತರರಿಗೆ ಒಳಿತು ಮಾಡುವುದರ ಮೂಲಕ ಮಾತ್ರವೇ ಸಾಧಿಸಬಹುದು. ನಿಃಸ್ವಾರ್ಥನಾಗಿ ಇತರರಿಗೆ ಒಳಿತನ್ನು ಮಾಡುವವನು ಸಚ್ಚಾರಿತ್ರ್ಯವಂತನಾಗುತ್ತಾನೆ. ಅಂತಹ ಉತ್ತಮ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಷ್ಟೂ ಆ ಸಮಾಜ ಉತ್ತಮಗೊಳ್ಳುತ್ತದೆ. ಆದ್ದರಿಂದಲೇ ಸ್ವಾಮೀಜಿ ಹೀಗೆ ಹೇಳಿದರು: "ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಪ್ರತಿಯೊಂದು ರಾಷ್ಟ್ರವನ್ನು ಏಳಿಗೆಗೆ ತರುವುದಕ್ಕೆ ಈ ಮೂರು ವಿಷಯಗಳು ಅತ್ಯವಶ್ಯಕ:

**೧. ಒಳ್ಳೆಯತನದ ಶಕ್ತಿಯಲ್ಲಿ ಅಚಲವಾದ ವಿಶ್ವಾಸ**
**೨. ಅಸೂಯೆ, ಅನುಮಾನಗಳು ಇಲ್ಲದೇ ಇರುವುದು**
**೩. ಯಾರು ಒಳ್ಳೆಯವರಾಗುವುದಕ್ಕೆ ಮತ್ತು ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನಪಡುವರೋ ಅವರಿಗೆಲ್ಲ ಸಹಾಯವನ್ನು ಮಾಡುವುದು.**

ಸತ್‌ಚಿಂತನೆ ಮತ್ತು ಸದಾಚಾರದಿಂದ ಕೂಡಿದ ಮನುಷ್ಯರು ಇಂದು ನಮಗೆ ಬೇಕಾಗಿದ್ದಾರೆ. ನಮ್ಮ ಸಮಸ್ಯೆಗಳಿಗೆ ಒಂದು ಮುಖ್ಯ ಕಾರಣವೆಂದರೆ ಸಮಾಜದ ವಿವಿಧ ಸ್ತರಗಳು ಚಾರಿತ್ರ್ಯಹೀನ ವ್ಯಕ್ತಿಗಳಿಂದ ತುಂಬಿಹೋಗಿರುವುದು. ಇಂತಹ ವ್ಯಕ್ತಿಗಳ ಕೈಯಲ್ಲಿ ಅಧಿಕಾರ ಮತ್ತು ಸಂಪತ್ತು ಸೇರಿದರೆ ಅದರಿಂದ ಜನರಿಗೆ, ಸಮಾಜಕ್ಕೆ ಮತ್ತು ದೇಶಕ್ಕೆ ಹಾನಿಯುಂಟಾಗುತ್ತದೆ. ಈ ಘೋರಸಮಸ್ಯೆಗೆ ಪರಿಹಾರವನ್ನು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ನಾವು ಕಂಡುಕೊಳ್ಳಬಹುದು. ✶

# ಸಾರ್ವಜನಿಕ ಸೇವೆಗಳಲ್ಲಿ ಭ್ರಷ್ಟಾಚಾರ

ನ್ಯಾಯಮೂರ್ತಿ
ಎನ್. ವೆಂಕಟಾಚಲ



ವಿಧಾನಸೌಧ, ಬೆಂಗಳೂರು

ಸರ್ಕಾರಿರಂಗದಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರದ ಬಗ್ಗೆ ಮತ್ತು ಅದನ್ನು ನಿಯಂತ್ರಿಸಲು ಇರುವ ಕಾನೂನುಗಳ ವಿಫಲತೆಯನ್ನು ಕುರಿತು ಈ ಲೇಖನದಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ. ಹಾಗೆಯೇ ಕರ್ನಾಟಕದಲ್ಲಿ ಲೋಕಾಯುಕ್ತ ಅಧಿನಿಯಮವು ಭ್ರಷ್ಟಾಚಾರದ ತಡೆಗೆ ಹೇಗೆ ಪರಿಣಾಮಕಾರಿ ಸಾಧನವಾಗಿದೆ ಎಂಬುದನ್ನೂ ತಿಳಿಸಲಾಗಿದೆ. ಮಾನ್ಯ ಲೇಖಕರು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತರಾದ ಗಣ್ಯರು ಹಾಗೂ ಇವರು ಕರ್ನಾಟಕದ ಲೋಕಾಯುಕ್ತರಾಗಿ ಉತ್ತಮ ಕಾರ್ಯವನ್ನು ಮಾಡಿದ್ದಾರೆ.

## ಭ್ರಷ್ಟಾಚಾರ: ಜಾಗತಿಕ ಸಮಸ್ಯೆ

ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸರ್ಕಾರಿ ನೌಕರರಲ್ಲಿ ಹಬ್ಬಿಕೊಂಡಿರುವ ತೀವ್ರತರನಾದ ಭ್ರಷ್ಟಾಚಾರವು, ಆ ದೇಶಗಳಿಗೆ ಒಂದು ಸಾಮಾನ್ಯ ಕಳಕಳಿಯ ವಿಷಯವಾಗಿದೆ. ಆ ನೌಕರರು ತಮಗೆ ನೀಡಲಾಗಿರುವ ಸಾರ್ವಜನಿಕ ಸೇವಾಧಿಕಾರವನ್ನು ತಮ್ಮ ಸ್ವಂತಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ; ರಸ್ತೆ ಮುಂತಾದ ಮೂಲಸೌಕರ್ಯಗಳ (Infrastructure) ಅಥವಾ ಮಾನವ ಸಂಪನ್ಮೂಲನದ ಅಭಿವೃದ್ಧಿಕಾರ್ಯಗಳಲ್ಲಿ ತಾವು ಸಲ್ಲಿಸಬೇಕಾದ ಸೇವೆಯನ್ನು ಸಮರ್ಥವಾಗಿ ಸಲ್ಲಿಸುವುದಿಲ್ಲ. ಇದೇ 'ಭ್ರಷ್ಟಾಚಾರ' ಅನ್ನಿಸಿಕೊಳ್ಳುತ್ತದೆ. ಇದರಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ, ವಿಶ್ವಸಂಸ್ಥೆಯು ಈಗಾಗಲೇ ನಿಶ್ಚಯಿಸಿರುವಂತೆ, ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು, ೨೦೧೫ ರ ವೇಳೆಗೂ ತಲುಪಲು ಸಾಧ್ಯವಾಗುತ್ತಿಲ್ಲ. ಇದು ನಿಜವಾಗಿಯೂ ಚಿಂತೆಗೀಡುಮಾಡುವ ವಿಷಯವಾಗಿದೆ.

ಆದರೂ, ಭ್ರಷ್ಟಾಚಾರವೆಂಬುದು ಪ್ರಪಂಚದಾದ್ಯಂತ ಸರ್ಕಾರಿ ನೌಕರರಲ್ಲಿ ಯಾವಾಗಲೂ ಅಸ್ತಿತ್ವದಲ್ಲಿತ್ತು ಎನ್ನುವುದಂತೂ ನಿರ್ವಿವಾದ. ಹಾಗೆ ನೋಡಿದರೆ, ಅತ್ಯಂತ ಪ್ರಬಲವಾಗಿದ್ದ ರೋಮನ್ ಚಕ್ರಾಧಿಪತ್ಯದ ಅಧಃಪತನ ಮತ್ತು ವಿನಾಶಕ್ಕೆ, ಅಂದಿನ ಸರ್ಕಾರಿ ನೌಕರರಲ್ಲಿ ವ್ಯಾಪಕವಾಗಿ ಹರಡಿದ್ದ ಭ್ರಷ್ಟಾಚಾರವೇ ಕಾರಣ ಎಂದು ಪ್ರಸಿದ್ಧ ಬ್ರಿಟಿಷ್ ಇತಿಹಾಸಜ್ಞ ಎಡ್ವರ್ಡ್ ಗಿಬ್ಬನ್ ಸಾರುತ್ತಾನೆ. ಹಾಗೂ ಪೌಲ್ ಎಚ್. ಡೌಗ್ಲಾಸ್ ತನ್ನ *Ethics of Government* ಎಂಬ ಗ್ರಂಥದಲ್ಲಿ ಎತ್ತಿ ತೋರಿಸುವಂತೆ, ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ, ೧೯ನೆಯ ಶತಮಾನದ ಅಂತ್ಯದವರೆಗೂ, ಭ್ರಷ್ಟಾಚಾರವು ಕೊನೆಗೊಂಡಿರಲಿಲ್ಲ.

## ಭಾರತದಲ್ಲಿ ಭ್ರಷ್ಟಾಚಾರ

ಭಾರತದಲ್ಲಿ ಸಾರ್ವಜನಿಕ ವಲಯದಲ್ಲಿನ ಭ್ರಷ್ಟಾಚಾರವು ತನ್ನ ಪರಾಕಾಷ್ಠತೆಯನ್ನು ಮುಟ್ಟಿದುದು, ದ್ವಿತೀಯ ಜಾಗತಿಕ ಸಮರದ ಸಮಯದಲ್ಲಿ, ಅಂದರೆ, ೧೯೩೯ ರಿಂದ ೧೯೪೫ ರ ಅವಧಿಯಲ್ಲಿ. ಈ ಸಮಯದಲ್ಲಿ ಯುದ್ಧಪ್ರಯತ್ನಗಳಿಗಾಗಿ ಸರ್ಕಾರವು ಸರ್ಕಾರಿ ನೌಕರರ ಮೂಲಕ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿತು. ಭಾರತವು ೧೯೪೭ರಲ್ಲಿ ಸ್ವತಂತ್ರಗೊಂಡಾಗ ನಿಃಸ್ವಾರ್ಥಿಗಳಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಬುದ್ಧಿಜೀವಿಗಳು, ಸ್ವತಂತ್ರ ಭಾರತವು ಒಬ್ಬನೇ ವ್ಯಕ್ತಿಯಿಂದಾಗಲಿ ಅಥವಾ ಒಂದು ನಿರ್ದಿಷ್ಟ ಗುಂಪಿನಿಂದಾಗಲಿ ಆಳಲ್ಪಡುವ ಕಲ್ಪನೆಯನ್ನು ಸಂಪೂರ್ಣವಾಗಿ ವಿರೋಧಿಸಿದ್ದರು. ಅಗಾಧ ರಾಜಕೀಯ ಅಧಿಕಾರವನ್ನು ಒಬ್ಬನೇ ವ್ಯಕ್ತಿ ಅಥವಾ ಕೆಲವೇ

ವ್ಯಕ್ತಿಗಳಿಂದ ಕೂಡಿದ ಗುಂಪಿನ ಕೈಯಲ್ಲಿಟ್ಟರೆ, ಅದು ಅಂಥವರನ್ನು ಸಾರಾಸಗಟಾಗಿ ಭ್ರಷ್ಟಾಚಾರಿಗಳನ್ನಾಗಿ ಮಾಡಬಹುದು ಮತ್ತು ಈ ಬಗೆಯ ಭ್ರಷ್ಟಾಚಾರದಿಂದ ಭಾರತವು, ತಾನು ಗಳಿಸಿದ ಸ್ವಾತಂತ್ರ್ಯವನ್ನು ಮತ್ತೊಮ್ಮೆ ಕಳೆದುಕೊಳ್ಳಬಹುದೆಂಬ ಆತಂಕ ಆ ಸ್ವಾತಂತ್ರ್ಯಯೋಧರಲ್ಲಿ ಮತ್ತು ಬುದ್ಧಿಜೀವಿಗಳಲ್ಲಿ ಮನೆ ಮಾಡಿತ್ತು. ಆ ಆತಂಕವೇ ಭಾರತವು ಸಂವಿಧಾನವನ್ನು ರಚಿಸಿ, ಜಾರಿಗೆ ತರುವುದಕ್ಕೆ ಅನುವು ಮಾಡಿಕೊಟ್ಟಿತು. ಆ ಮೂಲಕ ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪುಗೊಂಡಿತು. ಸಂವಿಧಾನದ ಪ್ರತಿಜ್ಞಾತ್ಮಕ ಧ್ಯೇಯವೇನೆಂದರೆ ಎಲ್ಲ ಪ್ರಜೆಗಳಿಗೂ, ಸಂವಿಧಾನಾತ್ಮಕ ಆಡಳಿತದ ಮೂಲಕ, ಕೇವಲ ರಾಜಕೀಯ ನ್ಯಾಯ ಮಾತ್ರವಲ್ಲ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಕೂಡ ದೊರಕಿಸಿಕೊಡುವುದಾಗಿತ್ತು.

ಕೇಂದ್ರ ಮತ್ತು ರಾಜ್ಯಗಳಲ್ಲಿ, ವಯಸ್ಕರ ಮತದಾನದ ಮೂಲಕ, ಆಗಿಂದಾಗ್ಗೆ ಅಧಿಕಾರಕ್ಕೆ ಬಂದ ಕೆಲವು ಜನಪ್ರಿಯ ಸರ್ಕಾರಗಳು ಕೃಷಿ, ಉದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರಿಗೆ, ಸಂವಹನ, ಆರೋಗ್ಯ, ನೈರ್ಮಲ್ಯ, ಶಿಕ್ಷಣ, ಗೃಹನಿರ್ಮಾಣ ಮತ್ತಿತರ ಕ್ಷೇತ್ರಗಳಲ್ಲಿ ಗಣನೀಯ ಅಭಿವೃದ್ಧಿಯ ಫಲವನ್ನು ತಂದುಕೊಟ್ಟಿರುವ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿದ್ದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗಿದ್ದರೂ, ಭಾರತವು ಇಡೀ ಪ್ರಪಂಚದಲ್ಲಿಯೇ ಅತ್ಯಂತ ಭ್ರಷ್ಟ ದೇಶಗಳಲ್ಲಿ ಒಂದೆಂಬ ಕುಖ್ಯಾತಿಯನ್ನು ಪಡೆದುಕೊಂಡಿದೆ. ಬರ್ಲಿನ್‌ನಲ್ಲಿರುವ ಅಂತರ ರಾಷ್ಟ್ರೀಯ ಪಾರದರ್ಶಕ ಸಂಸ್ಥೆಯವರು (Transparency International) ತಯಾರಿಸಿರುವ ೧೪೫ ದೇಶಗಳ ಪಟ್ಟಿಯಿಂದ ಇದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಭಾರತಕ್ಕೇ ಮೀಸಲಾದ ಸಮೀಕ್ಷೆಯೊಂದರ ಪ್ರಕಾರ, ಕೇವಲ ೧೧ ಸರ್ಕಾರಿ ವಿಭಾಗಗಳಿಗೆ ಸೇರಿದ ನೌಕರರು, ೨೦ ರಾಜ್ಯಗಳಲ್ಲಿ ಹರಡಿರುವ ೧೪,೪೦೫ ಪ್ರಜೆಗಳಿಂದ, ಒಂದೇ ವರ್ಷದಲ್ಲಿ, ಸುಮಾರು ೨೧,೦೬೮ ಕೋಟಿ ರೂಪಾಯಿಗಳಷ್ಟು ಭಾರೀ ಮೊತ್ತವನ್ನು ಲಂಚ ಅಥವಾ ವೇಗದಹಣವನ್ನಾಗಿ (Speed Money) ಲಪಟಾಯಿಸಿದ್ದಾರೆ! ಅದೂ ಆ ಜನರು ನ್ಯಾಯವಾಗಿ ಉಚಿತವಾಗಿ ಪಡೆಯಲು ಅರ್ಹರಾದ ಸೇವೆಗಳಿಗೆ! ನಮ್ಮ ದೇಶದ ಶಾಲಾಶಿಕ್ಷಣ, ಪೊಲೀಸ್, ಭೂಮಿ ಆಡಳಿತ ಮತ್ತು ಕೆಳವರ್ಗದ ನ್ಯಾಯಾಲಯದಂತಹ ವಿಭಾಗಗಳಿಗೆ ಸೇರಿದ ಅಧಿಕಾರಿವರ್ಗದವರು, ಅದೇ ಕ್ರಮದಲ್ಲಿಯೇ, ಅತ್ಯಂತ ಭ್ರಷ್ಟಜನರೆಂದು ಆ ಸಮೀಕ್ಷೆಯಲ್ಲಿ ತೋರಿಸಲಾಗಿದೆ.

ಭ್ರಷ್ಟಾಚಾರದ ಈ ಪಿಡುಗು ಭಾರತದ ಸರ್ಕಾರಿ ನೌಕರರಲ್ಲಿ ಹೆಚ್ಚುತ್ತಲೇ ಹೋಗುತ್ತಿದೆ. ಪ್ರತಿನಿತ್ಯವೂ ಹೊಸಹೊಸದಾಗಿ ಬೆಳಕಿಗೆ ಬರುತ್ತಿರುವ ಭ್ರಷ್ಟಾಚಾರದ ಹಗರಣಗಳು ಮತ್ತು ಪಿತೂರಿಗಳೇ ಇದಕ್ಕೆ ಸಾಕ್ಷಿ. ಇವುಗಳಿಲ್ಲದಿದ್ದರೆ, ಭಾರತವು ಖಂಡಿತವಾಗಿಯೂ ಚೆನ್ನಾಗಿ ಅಭಿವೃದ್ಧಿ ಹೊಂದಿದ ಮೂಲಸೌಕರ್ಯಗಳನ್ನು ಹೊಂದಿರುತ್ತಿತ್ತು; ಬಡತನ, ವ್ಯಾಧಿ ಮತ್ತು ನಿರಕ್ಷರತೆಗಳನ್ನು ನಿರ್ಮೂಲನೆ ಮಾಡಿಕೊಂಡಿರುತ್ತಿತ್ತು ಮತ್ತು ಅಭಿವೃದ್ಧಿಹೊಂದಿದ ದೇಶವಾಗಿ ಬೆಳೆದು, ಇತರೆ ಅಭಿವೃದ್ಧಿಶೀಲ ದೇಶಗಳಿಗೆ, ಅವುಗಳ ಅಭಿವೃದ್ಧಿಯ ಹಾದಿಯಲ್ಲಿ ಸಹಾಯ ಮಾಡುತ್ತಿತ್ತು.

## ರಾಜಕೀಯ ಇಚ್ಛಾಶಕ್ತಿಯ ಕೊರತೆ

ಗ್ಲ್ಯಾಡ್‌ಸ್ಟೋನ್ ಬ್ರಿಟನ್ನಿನ ಸರ್ಕಾರಿ ನೌಕರರಲ್ಲಿ ವ್ಯಾಪಕವಾಗಿದ್ದ ಭ್ರಷ್ಟಾಚಾರವನ್ನು ತೊಡೆದುಹಾಕಿದನು; ಲೀ ಕುಯಾನ್ ಯ್ಯೂ ಸಿಂಗಪೂರಿನಲ್ಲಿ ಇದೇ ರೀತಿ ಯಶಸ್ಸನ್ನು ಗಳಿಸಿದನು. ಹೀಗಿರುವಾಗ ಭಾರತದ ಪ್ರಧಾನಮಂತ್ರಿಯೊಬ್ಬರಿಗೆ ಇದನ್ನೇ ನಮ್ಮ ದೇಶದಲ್ಲೂ ಅನುಷ್ಠಾನಕ್ಕೆ ತರಲು ತುಂಬ ಕಷ್ಟವೇನೂ ಆಗಲಾರದು. ಅದಕ್ಕೆ ಬೇಕಾಗಿರುವುದು ಸ್ವಲ್ಪ ರಾಜಕೀಯ ಇಚ್ಛಾಶಕ್ತಿ, ಅಷ್ಟೇ. ಆದರೆ ಭಾರತದ ದುರದೃಷ್ಟವೋ ಏನೋ, ಯಾವ ಪ್ರಧಾನಮಂತ್ರಿಯೂ ಸರ್ಕಾರಿ ಸಂಸ್ಥೆಗಳಲ್ಲಿ ಕಂಡುಬರುವ ಭ್ರಷ್ಟಾಚಾರವನ್ನು ತೊಡೆದುಹಾಕಲು ಇದುವರೆಗೂ ಪ್ರಾಮಾಣಿಕವಾಗಿ ಪ್ರಯತ್ನಪಟ್ಟಿಲ್ಲ. ಅವರು ಮಾಡಬೇಕಾಗಿದ್ದುದು ಇಷ್ಟೇ – ಸಂಸತ್ತಿನಲ್ಲಿ ಅಧಿಕ ಬಹುಮತವನ್ನು ಪಡೆದಿರುವ ತಮ್ಮ ಪಕ್ಷವನ್ನು, ಈ ಉದ್ದೇಶಕ್ಕಾಗಿ ಬೇಕಾದ ಕೆಲವು ಕಾನೂನುಗಳನ್ನು ಜಾರಿಗೆ ತರುವಂತೆ ಪ್ರೇರೇಪಿಸುವುದು. ಇಂತಹ ಕಾನೂನುಗಳನ್ನು ಮಾಡುವುದಕ್ಕೆ ಬೇಕಾದುದು ಕೇವಲ ಸರಳ ಬಹುಮತವಷ್ಟೇ.

ಉದಾಹರಣೆಗೆ, ಭಾರತೀಯ ಸಂಸತ್ತು ಲೋಕಪಾಲ ಮಸೂದೆಯನ್ನು ಇನ್ನೂ ಅಂಗೀಕರಿಸಿಲ್ಲ. ಇದನ್ನು ೧೯೬೬ ರಷ್ಟು ಹಿಂದೆಯೇ ಮೊರಾರ್ಜಿ ದೇಸಾಯಿಯವರು ಅಧ್ಯಕ್ಷತೆ ವಹಿಸಿದ್ದ ಆಡಳಿತ ಸುಧಾರಣಾ ಸಮಿತಿ ಶಿಫಾರಸು ಮಾಡಿತ್ತು. ಆದರೂ ಅದನ್ನು ಒಂದಲ್ಲ ಒಂದು ಕಾರಣದಿಂದ ಮುಂದೂಡುತ್ತ ಬರಲಾಗಿದೆ. ಹಾಗೆಯೇ ೧೯೮೮ರ, ಬೇನಾಮಿ ವ್ಯವಹಾರಗಳನ್ನು ಪ್ರತಿಷೇಧಿಸುವ ಕಾನೂನು, ಸರ್ಕಾರಿ ನೌಕರರು ಇತರರ (ಬೇನಾಮಿ) ಹೆಸರಿನಲ್ಲಿ, ಅನ್ಯಾಯದಿಂದ ಗಳಿಸಿದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ. ಇದಕ್ಕಾಗಿ ಸಂಸತ್ತಿನಲ್ಲಿ ಅಂಗೀಕಾರ ಪಡೆದಿದ್ದರೂ, ಕೇಂದ್ರ ಸರ್ಕಾರ ಇನ್ನೂ ಜಾರಿಗೊಳಿಸಬೇಕಾಗಿದೆ. ಇದನ್ನು ಮಾಡಲು ಕೆಲವು ಸರಳ ನಿಯಮಗಳನ್ನು ರೂಪಿಸಿ ಅಳವಡಿಸಿಕೊಳ್ಳಬೇಕಾಗಿದೆ, ಅಷ್ಟೇ. ಸರ್ವೋಚ್ಚ ನ್ಯಾಯಾಲಯವು ೧೯೬೭ ರಲ್ಲಿಯೇ ಕೇಂದ್ರ ಸರ್ಕಾರಕ್ಕೆ, ಸಂಸತ್ತು ಈ ಬಗ್ಗೆ ಒಂದು ಸೂಕ್ತ ಮಸೂದೆಯನ್ನು ಅಂಗೀಕರಿಸುವಂತೆ ಸಲಹೆ ಮಾಡಿತ್ತು. ಅದಲ್ಲದೆ ನ್ಯಾಯಾಂಗ ಆಯೋಗವು ಇದಕ್ಕೆ ಸಂಬಂಧಪಟ್ಟ ಮಸೂದೆಯ ಕರಡನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೂ, ಇದುವರೆಗೂ ಆ ದಿಕ್ಕಿನಲ್ಲಿ ಏನನ್ನೂ ಮಾಡಲಾಗಿಲ್ಲ. ೧೯೮೮ರಲ್ಲಿ ಅಂಗೀಕರಿಸಲಾದ ಭ್ರಷ್ಟಾಚಾರ ನಿವಾರಣಾ ಮಸೂದೆಯು ಪ್ರಸ್ತುತ ಜಾರಿಯಲ್ಲಿ ಇರುವುದೇನೂ ನಿಜ. ಆದರೆ ಈ ಕಾನೂನಿನಲ್ಲಿ, ಸರ್ಕಾರಿ ನೌಕರರು ಹೊಂದಿರುವ, ಅವರ ಆದಾಯಕ್ಕೂ ಮೀರಿದ ಆಸ್ತಿಪಾಸ್ತಿಗಳು, ಅನ್ಯಾಯಯುತವಾಗಿ ಗಳಿಸಿದಂಥವು ಎಂಬುದನ್ನು ಸಾಬೀತು ಪಡಿಸುವ ಹೊಣೆಯನ್ನು ಸರ್ಕಾರಿ ವಕೀಲರ ಮೇಲೆ ಹೇರಲಾಗಿದೆ. ತಮ್ಮ ಆಸ್ತಿಯು ಕ್ರಮವಾಗಿ ಗಳಿಸಿಕೊಂಡದ್ದು ಎನ್ನುವುದನ್ನು ಸಾಬೀತು ಮಾಡುವ ಹೊಣೆಯನ್ನು ಸರ್ಕಾರಿ ನೌಕರರ ಮೇಲೆಯೇ ಹೊರಿಸುವ ಬಗ್ಗೆ ಈ ಕಾನೂನಿನಲ್ಲಿ ತಿದ್ದುಪಡಿ ತರಬೇಕೆಂದು ಸಂವಿಧಾನ ಪರಾಮರ್ಶನಾ ಆಯೋಗ ಶಿಫಾರಸು ಮಾಡಿದೆ. ಆದರೆ ಅದು ಇನ್ನೂ ಕಾರ್ಯಗತವಾಗಬೇಕಾಗಿದೆ. ಇವೆಲ್ಲಕ್ಕೂ ಹೆಚ್ಚಿನ ವಿರೋಧಾಭಾಸದ ಸಂಗತಿಯೆಂದರೆ, ಸಂಸತ್ತಿನ

ಕಾನೂನಿನ ಪ್ರಕಾರ ರಚನೆಯಾಗಿರುವ ವಿಚಕ್ಷಣಾ ಆಯೋಗದ (Vigilance Commission) ನೇತೃತ್ವ ವಹಿಸಿರುವ ಮುಖ್ಯ ವಿಚಕ್ಷಣಾ ಅಧಿಕಾರಿ (Chief Vigilance Officer), ಯಾವುದೇ ಹಿರಿಯ ಸರ್ಕಾರಿ ಅಧಿಕಾರಿಯ ವಿರುದ್ಧ ಇರುವ ಭ್ರಷ್ಟಾಚಾರದ ಆರೋಪವನ್ನು ವಿಚಾರಣೆಗೆ ತೆಗೆದುಕೊಳ್ಳುವುದಕ್ಕೆ, ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕಾಗಿದೆ!

ಭ್ರಷ್ಟಾಚಾರವೆನ್ನುವುದು ನಮ್ಮ ದೇಶದ ಅತ್ಯಂತ ಘೋರ ಶತ್ರು. ಅದು ರಾಷ್ಟ್ರವಿರೋಧಿ, ಬಡವರ ವಿರೋಧಿ ಹಾಗೂ ಅಭಿವೃದ್ಧಿಯ ವಿರೋಧಿಯೂ ಆಗಿದೆ. ಹೀಗಿರುವಾಗ ಅದನ್ನು ನಿರ್ಮೂಲನಗೊಳಿಸಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಸೂಕ್ತ ಮತ್ತು ಪರಿಣಾಮಕಾರಿ ಕ್ರಮವನ್ನು ಕೈಗೊಳ್ಳದೆ ಇರುವುದು ನಿಜಕ್ಕೂ ದುರದೃಷ್ಟಕರವೇ ಸರಿ.

### ಕರ್ನಾಟಕ ಲೋಕಾಯುಕ್ತ ಮಸೂದೆ

ಕರ್ನಾಟಕ ಲೋಕಾಯುಕ್ತ ಮಸೂದೆ, ೧೯೮೪ರ ಅನ್ವಯ ಲೋಕಾಯುಕ್ತರನ್ನು ನೇಮಕ ಮಾಡಲಾಗಿದೆ. ಇದರ ಮುಖ್ಯ ಉದ್ದೇಶ ಭ್ರಷ್ಟ ಸರ್ಕಾರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳುವುದು ಮತ್ತು ಅವರು ಅವಶ್ಯವಾಗಿ ಕೈಗೊಳ್ಳಬೇಕಾದಂತಹ ಸೇವೆಗಳನ್ನು ನಿರ್ವಹಿಸುವಂತೆ ಮಾಡುವುದು. ಇದರ ಬಗ್ಗೆ ನಾನಿಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

ಕರ್ನಾಟಕದಲ್ಲಿನ ಸರ್ಕಾರಿ ಮತ್ತು ಅರೆ–ಸರ್ಕಾರಿ ಸಂಘ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವ ಪ್ರತಿಯೊಬ್ಬ ಸಾರ್ವಜನಿಕ ಕ್ಷೇತ್ರದ ಸೇವಕನೂ, ಮುಖ್ಯಮಂತ್ರಿಯಿಂದ ಹಿಡಿದು ಕಛೇರಿಯ ಸೇವಕನವರೆಗೆ, ತನ್ನ ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ವಿಷಯದಲ್ಲಿ ಲೋಕಾಯುಕ್ತರಿಗೆ ಉತ್ತರದಾಯಿಯೂ, ಜವಾಬ್ದಾರನೂ ಆಗಿರುತ್ತಾನೆ. ಹೀಗೆ ಲೋಕಾಯುಕ್ತ ಮಸೂದೆಯು ಲೋಕಾಯುಕ್ತರಿಗೆ, ಸರ್ಕಾರಿ ನೌಕರರ ಆಡಳಿತಾತ್ಮಕ ಕ್ರಿಯೆಗಳ ಮೇಲೆ ನಿಗಾ ಇಡುವ ಅಧಿಕಾರವನ್ನು ನೀಡಿದೆ. ಈ ಮಸೂದೆಯ ಪ್ರಕಾರ, ಅವರು ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳು, ಮಾಡುವ ಶಿಫಾರಸುಗಳು, ದಾಖಲಿಸುವ ಅಂಕಿಅಂಶಗಳು – ಇವೆಲ್ಲವನ್ನೂ ಆಡಳಿತಾತ್ಮಕ ಕ್ರಿಯೆಗಳು ಎಂದು ಪರಿಗಣಿಸಬಹುದು. ಅದಲ್ಲದೆ, ಒಬ್ಬ ಸಾರ್ವಜನಿಕ ಸೇವಕನು ತನ್ನ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲನಾಗುವುದನ್ನೂ ಇವುಗಳಲ್ಲಿ ಸೇರಿಸಲಾಗಿದೆ. ಹೀಗೆ ಕರ್ನಾಟಕದಲ್ಲಿರುವ ಪ್ರತಿಯೊಬ್ಬ ಸರ್ಕಾರಿ ನೌಕರನೂ ಲೋಕಾಯುಕ್ತರಿಗೆ ಉತ್ತರದಾಯಿಯೂ, ಜವಾಬ್ದಾರನೂ ಆಗಿರುತ್ತಾನೆ. ಹೀಗಾಗಿ ಆತನ ನ್ಯಾಯಬಾಹಿರ ಮತ್ತು ದೋಷಪೂರ್ಣ ಕರ್ತವ್ಯನಿರ್ವಹಣೆ ಅಥವಾ ವಿಫಲತೆಗಳನ್ನು ಪ್ರಸ್ತಾಪಿಸಿ, ಯಾವುದೇ ವ್ಯಕ್ತಿಯು ಲೋಕಾಯುಕ್ತರಿಗೆ ಅಂತಹ ಸಂದೇಹಾಸ್ಪದ ಆಡಳಿತಾತ್ಮಕ ಕ್ರಮಗಳ ವಿರುದ್ಧ ದೂರನ್ನು ಸಲ್ಲಿಸಬಹುದಾಗಿದೆ. ಈ ಮೂಲಕ ಆ ಸರ್ಕಾರಿ ನೌಕರನ ವಿರುದ್ಧ ದೋಷಾರೋಪವನ್ನು ಹೊರಿಸಬಹುದು ಅಥವಾ ತನ್ನ ಕುಂದುಕೊರತೆಗಳಿಗೆ ತಕ್ಕ ಪರಿಹಾರವನ್ನು ಪಡೆದುಕೊಳ್ಳಬಹುದು.

ದೂರು ಕೊಡುವವನು ಮುಖ್ಯವಾಗಿ ಮೂರು ಸಂದರ್ಭಗಳಲ್ಲಿ ತನ್ನ ದೂರನ್ನು ನೀಡಬಹುದು: ೧. ಸಂಬಂಧಿತ ವ್ಯಕ್ತಿಯು ತನ್ನ ಕರ್ತವ್ಯನಿರ್ವಹಣೆಯ ಅವಧಿಯಲ್ಲಿ, ತನಗಾಗಲಿ ಅಥವಾ ಇನ್ನಿತರ ಯಾವುದೇ ವ್ಯಕ್ತಿಗಾಗಲಿ ಲಾಭವನ್ನು ಪಡೆದುಕೊಂಡು, ಆ ಮೂಲಕ ಮತ್ತಾವುದೇ ವ್ಯಕ್ತಿಯ ತೊಂದರೆ ಅಥವಾ ಕಷ್ಟಕ್ಕೆ ಕಾರಣನಾಗಿದ್ದರೆ; ೨. ಅಂಥ ವ್ಯಕ್ತಿಯು ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅನಗತ್ಯ ಔದಾರ್ಯ, ಅಪ್ರಾಮಾಣಿಕತೆಗಳ ಸಲುವಾಗಿ ಅಪರಾಧಿಯಾಗಿದ್ದರೆ; ೩. ಒಬ್ಬ ಸರ್ಕಾರಿ ನೌಕರನು ತಾನು ಯಾವ ಸ್ಥಾನವನ್ನು ಹೊಂದಿರುವನೋ, ಅದಕ್ಕೆ ಅನುಗುಣವಾಗಿ ಪಾಲಿಸಬೇಕಾದ ಪ್ರಾಮಾಣಿಕತೆ ಮತ್ತು ರೀತಿನೀತಿಗಳ ವಿಧಾನಗಳನ್ನು ಪಾಲಿಸುವಲ್ಲಿ ವಿಫಲನಾಗಿದ್ದರೆ.

ಹಾಗೆಯೇ ಸಂಬಂಧಿತ ಅಧಿಕಾರಿಯು ತನ್ನ ಕುಂದು ಕೊರತೆಗಳಿಗೆ ತಕ್ಕ ಪರಿಹಾರವನ್ನು ನೀಡಲು ವಿಫಲನಾಗಿದ್ದಾನೆಂದೂ ಅಥವಾ ಯಾವುದೇ ಸರ್ಕಾರಿ ನೌಕರನ ದುರಾಡಳಿತದ ಪರಿಣಾಮದಿಂದಾಗಿ ತನಗೆ ದೀರ್ಘಕಾಲೀನ ಅನ್ಯಾಯವಾಗಿದೆಯೆಂದೂ ಒಬ್ಬನು ದೂರು ನೀಡಬಹುದು. ಒಬ್ಬ ಸರ್ಕಾರಿ ನೌಕರನ ವಿರುದ್ಧ ದುರಾಡಳಿತದ ಆರೋಪಗಳನ್ನು ಈ ಕೆಳಕಂಡ ಸಂದರ್ಭಗಳಲ್ಲಿ ನೀಡಬಹುದು: ೧. ಯಾವುದೇ ಕ್ರಮವಾಗಲಿ ಅಥವಾ ಆ ಕ್ರಮಕ್ಕೆ ಮಾರ್ಗದರ್ಶಿಯಾದ ಆಡಳಿತದ ವಿಧಾನವಾಗಲಿ ಅಥವಾ ಪದ್ಧತಿಯಾಗಲಿ ತರ್ಕರಹಿತವೂ, ಅನ್ಯಾಯದಿಂದ ಕೂಡಿದ್ದೂ, ಶೋಷಣೆ ಉಂಟುಮಾಡುವುದೂ ಅಥವಾ ಪಕ್ಷಪಾತದಿಂದ ಕೂಡಿದ್ದೂ ಆಗಿದ್ದರೆ; ೨. ಯಾವುದೇ ಕ್ರಮವನ್ನು ತೆಗೆದುಕೊಳ್ಳುವಲ್ಲಿ ದುರುದ್ದೇಶಪೂರಿತ ನಿರ್ಲಕ್ಷ್ಯ ಅಥವಾ ಅನವಶ್ಯಕ ವಿಳಂಬವಾಗಿದ್ದರೆ ಅಥವಾ ಅಂತಹ ವಿಳಂಬಕ್ಕೆ ಮಾರ್ಗದರ್ಶಿಯಾದ ಆಡಳಿತದ ವಿಧಾನವಾಗಲಿ ಅಥವಾ ಪದ್ಧತಿಯಾಗಲಿ ತರ್ಕರಹಿತವೂ, ಅನ್ಯಾಯದಿಂದ ಕೂಡಿದ್ದೂ, ಶೋಷಣೆ ಉಂಟುಮಾಡುವುದೂ ಅಥವಾ ಪಕ್ಷಪಾತದಿಂದ ಕೂಡಿದ್ದೂ ಆಗಿದ್ದರೆ.

ಯಾವುದೇ ಒಬ್ಬ ಸರ್ಕಾರಿ ನೌಕರನ ವಿರುದ್ಧ ದೂರು ಅಥವಾ ಆಕ್ಷೇಪ ಬಂದಾಗ, ಲೋಕಾಯುಕ್ತರು ಮೊದಲು ಮಾಡಬೇಕಾದ ಕೆಲಸವೇನೆಂದರೆ, ಅದಕ್ಕೆ ಸಂಬಂಧಿಸಿದ ಕಛೇರಿ ಕಡತಗಳನ್ನು ತರಿಸಿಕೊಳ್ಳುವುದು ಅಥವಾ ವಶಕ್ಕೆ ತೆಗೆದುಕೊಳ್ಳುವುದು ಹಾಗೂ ಅವುಗಳನ್ನು ಸರಿಯಾಗಿ ಪರಿಶೀಲಿಸಿ ವಿವಾದದ ಸತ್ಯಾಂಶವನ್ನು ತಿಳಿದುಕೊಳ್ಳುವುದು; ಅನಂತರ, ಸರ್ಕಾರಿ ನೌಕರನು ಫಿರ್ಯಾದುದಾರನ ತೊಂದರೆಯನ್ನು ಸರಿಪಡಿಸಿಕೊಡುವಂತೆ ಮಾಡುವುದು ಮತ್ತು ಆವಶ್ಯಕತೆ ಬಿದ್ದಲ್ಲಿ, ಗಂಭೀರವಾದ ಅಕ್ರಮಗಳು ಜರುಗಿದ್ದರೆ, ಶಿಸ್ತಿನ ಅಥವಾ ನ್ಯಾಯಾಂಗಕ್ರಮವನ್ನು ಆತನ ವಿರುದ್ಧ ಜಾರಿಗೆ ತರುವುದು. ಈ ಬಗೆಯ ತನಿಖೆಯನ್ನು ಮುಕ್ತ ನ್ಯಾಯಾಲಯದಲ್ಲಿ ಅಥವಾ ಸ್ಥಳದಲ್ಲಿಯೇ, ದೂರನ್ನು ಪಡೆದ ನಂತರವಷ್ಟೇ ಅಥವಾ ಅದಿಲ್ಲದೆಯೂ ನಡೆಸಬಹುದಾಗಿದೆ.

ಅದಲ್ಲದೆ ಲೋಕಾಯುಕ್ತ ಅಧಿನಿಯಮವು ಲೋಕಾಯುಕ್ತರಿಗೆ ರಾಜ್ಯದ ಗ್ರಾಮೀಣ ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಯಾವುದೇ ಸರ್ಕಾರಿ ಅಥವಾ ಅರೆಸರ್ಕಾರಿ ಕಛೇರಿಗಳಿಗೆ, ಯಾವುದೇ ಮುನ್ಸೂಚನೆ ನೀಡದೆ, ಹಠಾತ್ ಭೇಟಿ ನೀಡುವ ಮತ್ತು ಸ್ಥಳದಲ್ಲಿಯೇ ದೂರನ್ನು ಸ್ವೀಕರಿಸಿ, ಪರಿಶೀಲಿಸುವ ಅಧಿಕಾರವನ್ನು